# ಮನೆಯಲ್ಲಿಯೇ ರಾಯರ ಆರಾಧನೆ ಮಾಡುವ ಕ್ರಮ

ಶ್ರೀ ನರಹರಿಯವರು, ನಾವು ರಾಯರ ಆರಾಧನೆಯನ್ನು ಮಾಡಬೇಕಾದ ಬಗೆ, ರಾಯರಿಗೆ ಸೇವೆ ಸಲ್ಲಿಸಬೇಕಾದ ಬಗೆ, ರಾಯರ ಪ್ರೀತಿಗಾಗಿ ಮಾಡಬೇಕಾದ ದಾನ ಧರ್ಮಗಳನ್ನು ತಿಳಿಸಿ ಎಂದು ಹೇಳಿದ್ದಾರೆ.

ಮಠಗಳಲ್ಲಿ ನಡೆಯುತ್ತಿರುವ ರಾಜಕೀಯ, ಅನಾಚಾರಗಳನ್ನು ನೋಡಿರುವ ಬಹುತೇಕ ಜನರು ಇಂದು ಮಠಗಳಿಗೆ ಹೋಗುವದಿಲ್ಲ. ಕೆಲವರಿಗೆ ಹೋಗಲು ಸಾಧ್ಯವಿರುವದಿಲ್ಲ. ಹೀಗಾಗಿ ಮನೆಯಲ್ಲಿಯೇ ರಾಯರ ಆರಾಧನೆಯನ್ನು ಮಾಡುವ ಬಗೆಯ ಕುರಿತು ಚಿಂತನೆ ಮಾಡೋಣ.

ಶ್ರೀ ರಾಘವೇಂದ್ರಸ್ವಾಮಿಗಳ ಆರಾಧನೆಯನ್ನು ಮಾಡಬೇಕಾದರೆ ಆ ಮಹಾಗುರುಗಳು ನಮ್ಮ

ಮನೆಯಲ್ಲಿರಬೇಕು. ರಾಯರು ಅದೆಷ್ಟು ಕರುಣಾಳುಗಳು ಎಂದರೆ ತಾವು ಕೇವಲ ವೃಂದಾವನದಲ್ಲಷ್ಟೇ ಅಲ್ಲ, ತಮ್ಮ ಗ್ರಂಥಗಳಲ್ಲಿಯೂ ಸನ್ನಿಹಿತರಾಗಿರುತ್ತೇವೆ ಎಂಬ ಅಭಯವನ್ನು ತಮ್ಮ ಜೀವಿತಕಾಲದಲ್ಲಿಯೇ ತಮ್ಮ ಭಕ್ತರಿಗೆ ನೀಡಿದ್ದಾರೆ.

ಶ್ರೀ ರಾಘವೇಂದ್ರಾಸ್ವಾಮಿಗಳು ರಚನೆ ಮಾಡಿದ ಗ್ರಂಥಸಂಪತ್ತು ತುಂಬ ದೊಡ್ಡದು. ನಾನು ಯಾವಾಗಲೂ ಹೇಳುತ್ತಿರುತ್ತೇನೆ, ನಮ್ಮ ಮಾಧ್ವಗುರುಪರಂಪರೆಯಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳದು ತಾಯಿಯ ಸ್ಥಾನ. ಅದೆಷ್ಟೇ ಅದೆಷ್ಟೇ ಪರಮಕ್ಲಿಷ್ಟವಾದ ಪ್ರಮೇಯವಿರಲಿ, ತಾಯಿ ಮಗುವಿಗೆ ತಿಳಿಹೇಳುವಂತೆ ಅತ್ಯಂತ ಸುಲಭವಾಗಿ ಆ ಕಠಿಣಪ್ರಮೇಯವನ್ನು ಸುಲಭಶಬ್ದಗಳಿಂದ ಮನಗಾಣಿಸಿಬಿಡುತ್ತಾರೆ, ಆ ಮಾತೃಹೃದಯದ, ಮಾತೃಸ್ವಭಾವದ ಗುರುಸಾರ್ವಭೌಮರು.

ಆ ಮಹಾನುಭಾವರು ವೇದವ್ಯಾಸದೇವರ ಬ್ರಹ್ಮಸೂತ್ರಗಳಿಗೆ ತಂತ್ರದೀಪಿಕಾ ಎಂಬ

ವ್ಯಾಖ್ಯಾನವನ್ನು ರಚಿಸಿದ್ದಾರೆ. ಶ್ರೀಮದಾಚಾರ್ಯರ ಅಣುಭಾಷ್ಯಕ್ಕೆ ತತ್ವಮಂಜರೀ ಎಂಬ ವ್ಯಾಖ್ಯಾನವನ್ನು ರಚಿಸಿದ್ದಾರೆ. ಉಪನಿಷತ್ತುಗಳಿಗೆ ಖಂಡಾರ್ಥವನ್ನು ಬರೆದಿದ್ದಾರೆ. ವೇದಮಂತ್ರಗಳ ಅರ್ಥವನ್ನು ತಿಳಿಸುವ ಮಂತ್ರಾರ್ಥಮಂಜರಿಯನ್ನು ರಚಿಸಿದ್ದಾರೆ. ಟೀಕಾಕೃತ್ಪಾದರ ನ್ಯಾಯಸುಧಾಕ್ಕೆ ಪರಿಮಳವನ್ನೂ, ತತ್ವಪ್ರಕಾಶಿಕಾಕ್ಕೆ ಭಾವದೀಪವನ್ನು, ಉಳಿದ ಟೀಕಾಗ್ರಂಥಗಳಿಗೆ ಭಾವದೀಪ ಎಂಬ ಹೆಸರಿನಲ್ಲಿಯೇ ಅದ್ಭುತ ವ್ಯಾಖ್ಯಾನಗಳನ್ನು ರಚಿಸಿದ್ದಾರೆ. ಚಂದ್ರಿಕಾಚಾರ್ಯರ ಚಂದ್ರಿಕಾಗ್ರಂಥಕ್ಕೆ, ತರ್ಕತಾಂಡವಗ್ರಂಥಕ್ಕೆ ವ್ಯಾಖ್ಯಾನಗಳನ್ನು ರಚಿಸಿದ್ದಾರೆ. ಇವಲ್ಲದೇ ತಾತ್ಪರ್ಯನಿರ್ಣಯದ ಸಂಗ್ರಹವನ್ನು, ಪ್ರಮೇಯನವಮಾಲಿಕೆಯ ವ್ಯಾಖ್ಯಾನವನ್ನೂ, ಪ್ರಾತಃಸಂಕಲ್ಪಗದ್ಯ ಮುಂತಾದ ಸ್ವತಂತ್ರ ಗ್ರಂಥಗಳನ್ನು ಶ್ರೀ ಗುರುರಾಜರು ರಚಿಸಿದ್ದಾರೆ.

ಈ ಎಲ್ಲ ಗ್ರಂಥಗಳೂ ಅವರ ಪ್ರತಿರೂಪ. ಅವರ ಪರಮಶ್ರೇಷ್ಠಸನ್ನಿಧಾನವನ್ನು ಹೊತ್ತ ಅಕ್ಷರವೃಂದಾವನಗಳು. ಈ ಗ್ರಂಥವೃಂದಾವನಕ್ಕೆ

ಆವಾಹನೆ ಬೇಕಾಗಿಲ್ಲ, ಪ್ರತಿಷ್ಠಾಪನೆಯಿಲ್ಲ, ಕಳಾಕರ್ಷಣೆ ಎಂಬ ವಿಸರ್ಜನೆಯಿಲ್ಲ. ಪರಮಾತ್ಮ ಸಾಲಿಗ್ರಾಮದಲ್ಲಿ ತನ್ನ ಅಪೇಕ್ಷೆಯಂತೆ ತಾನಾಗಿ ಬಂದು ಸನ್ನಿಹಿತನಾಗಿರುವಂತೆ[1] ಮಹಾಗುರುಗಳು ತಮ್ಮ ಗ್ರಂಥಗಳಲ್ಲಿ ಸನ್ನಿಹಿತರಾಗಿರುತ್ತಾರೆ.

ಇವುಗಳಲ್ಲಿ ಯಾವುದಾದರೂ ಒಂದು ಗ್ರಂಥವನ್ನು, ಮುಖ್ಯವಾಗಿ ಚಂದ್ರಿಕಾಗ್ರಂಥಕ್ಕೆ ವ್ಯಾಖ್ಯಾನವಾದ ಪ್ರಕಾಶಿಕಾಗ್ರಂಥವನ್ನು ತಂದಿಟ್ಟುಕೊಳ್ಳಿ. ಕಾರಣ, ಆ ಗ್ರಂಥದಲ್ಲಿ ಬ್ರಹ್ಮಸೂತ್ರಗಳ ರೂಪದಲ್ಲಿ ಶ್ರೀವೇದವ್ಯಾಸದೇವರು, ಭಾಷ್ಯದ ರೂಪದಲ್ಲಿ ಶ್ರೀಮದಾಚಾರ್ಯರು, ತತ್ವಪ್ರಕಾಶಿಕೆಯ ರೂಪದಲ್ಲಿ ಶ್ರೀಮಟ್ಟೀಕಾಕೃತ್ಪಾದರು, ಚಂದ್ರಿಕೆಯ ರೂಪದಲ್ಲಿ ಶ್ರೀಮಚ್ಚಂದ್ರಿಕಾಚಾರ್ಯರು, ಪ್ರಕಾಶಿಕೆಯ ರೂಪದಲ್ಲಿ ಶ್ರೀಪರಿಮಳಾಚಾರ್ಯರು ಎಲ್ಲರೂ ಸನ್ನಿಹಿತರಾಗಿದ್ದಾರೆ. ನಮ್ಮ ಪರಂಪರೆಯ ಮುನಿತ್ರಯರು (ಶ್ರೀಮದಾಚಾರ್ಯರು, ಟೀಕಾಕೃತ್ಪಾದರು ಮತ್ತು ಚಂದ್ರಿಕಾಚಾರ್ಯರು) ಹಾಗೂ ಯಾರಿಂದ ಮಧ್ವಸಿದ್ಧಾಂತದ ಫಲವನ್ನು

---

[1]ದೃಷ್ಟಾಂತ ಮಾತ್ರ. ಸರ್ವಸಾಮ್ಯವಲ್ಲ.

ನಾವು ಪಡೆಯುತ್ತೇವೆಯೋ ಅಂತಹ ನಮ್ಮ ಮಧ್ವಸಿದ್ಧಾಂತದ ಆಧಾರಸ್ತಂಭರಾದ ಶ್ರೀ ಪರಿಮಳಾಚಾರ್ಯರು, ಇಷ್ಟು ಜನರ ಸನ್ನಿಧಾನ ನಮಗೆ ಒಂದೆಡೆಯೇ ಆ ಚಂದ್ರಿಕಾಪ್ರಕಾಶಗ್ರಂಥದಿಂದ ದೊರೆಯುತ್ತದೆ.

ಒಂದು ಮಣೆಯನ್ನು ಶುದ್ಧವಾಗಿ ತೊಳೆದಿಟ್ಟುಕೊಳ್ಳಿ. ಬೆಳ್ಳಿ ಬಂಗಾರಗಳೇ ಬೇಕೆಂಬ ನಿಯಮವಿಲ್ಲ. ಭಗವಂತ ನೀಡಿದ್ದರೆ ಅವಶ್ಯವಾಗಿ ಉಪಯೋಗಿಸಿ. ಇಲ್ಲದಿದ್ದರೆ ಅದನ್ನು ಸಂಪಾದಿಸುವ ಶ್ರಮ ಬೇಡ. ದೇವದಾರಿನ ಮಣೆ ಸಾಕು. ಸಾಧ್ಯವಾದರೆ ನಿಮ್ಮ ಮನೆಯ ಹಾಲಿನಲ್ಲಿ, ಅಥವಾ ವಿಶಾಲವಾದ ಕೊಠಡಿಯಲ್ಲಿ, ಪ್ರದಕ್ಷಿಣೆ ಬರಲಿಕ್ಕೆ ಅನುಕೂಲವಾಗುವಂತೆ ಸ್ಥಳವನ್ನು ಶುದ್ಧ ಮಾಡಿ, ಸೆಗಣಿಯಿಂದ ಸಾರಿಸಿ,  ರಂಗೋಲಿಯನ್ನು ಹಾಕಿ ಅದರ ಮೇಲೆ ಮಣೆಯನ್ನಿಡಿ. ದೇವರ ಮನೆಯಲ್ಲಿಯೇ ಪ್ರದಕ್ಷಿಣೆಗೆ ಅನುಕೂಲವಿದ್ದರೆ ಅತ್ಯುತ್ತಮ. ಇಲ್ಲದಿದ್ದರೆ ಹೀಗೆ ಮಾಡಿ. ಆ ಮಣೆಯ ಮೇಲೆ ಸೂತ್ರ-ಭಾಷ್ಯ-ತತ್ವಪ್ರಕಾಶಿಕಾ-ಚಂದ್ರಿಕಾ ಸಮೇತವಾದ ಶ್ರೀ ರಾಘವೇಂದ್ರಸ್ವಾಮಿಗಳ ಪ್ರಕಾಶಿಕಾ ಗ್ರಂಥವನ್ನಿಡಿ. ಅದು ದೊರೆಯದಿದ್ದರೆ

ಪರಿಮಳ, ಅದೂ ಇಲ್ಲದಿದ್ದಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳ ಯಾವುದಾದರೂ ಗ್ರಂಥವನ್ನಿಡಿ. ಅದರ ಹಿಂಬಾಗದಲ್ಲಿ ಆ ಮಂತ್ರಾಲಯಪ್ರಭುಗಳ ಪರಮಮಂಗಳವಾದ ಮೂಲವೃಂದಾವನದ ಚಿತ್ರವನ್ನಿಡಿ. ಮಣೆಯ ಮುಂದೆ ಶೋಭಾಯಮಾನವಾದ ದೀಪಗಳನ್ನು ಹಚ್ಚಿ.

ಮನೆಯಲ್ಲೇ ಬೆಳೆದ ಹೂಗಳನ್ನು (ಕೊಂಡು ತಂದ ಹೂಗಳು ಪೂಜೆಗೆ ಸರ್ವಥಾ ನಿಷಿದ್ಧ)  ಒಂದು ಪಾತ್ರೆಯಲ್ಲಿಟ್ಟುಕೊಂಡು ಭಕ್ತಿಯಿಂದ ಶ್ರೀ ವಾದೀಂದ್ರತೀರ್ಥರು ರಚಿಸಿದ ಗುರುಗುಣಸ್ತವನಕೃತಿಯನ್ನಾಗಲೀ, ಶ್ರೀ ಅಪ್ಪಣಾಚಾರ್ಯರು ರಚಿಸಿದ ಪರಮಾದ್ಭುತ ರಾಘವೇಂದ್ರಸ್ತೋತ್ರವನ್ನಾಗಲೀ, ಅದೂ ಬಾರದಿದ್ದರೆ ಶ್ರೀ ರಾಘವೇಂದ್ರಾಯ ನಮಃ ಎಂಬ ಕಾಮಧೇನುಸದೃಶವಾದ ಮಂತ್ರವನ್ನಾಗಲೀ ಪಠಣೆ ಮಾಡುತ್ತ ಹೂಗಳನ್ನು ಏರಿಸಿ. ಶುದ್ಧವಾದ ಹಣ್ಣುಗಳನ್ನು ಮುಂದಿಟ್ಟು ನಿವೇದಿಸಿ.

ಆ ಬಳಿಕ ಎದ್ದುನಿಂತು ಸರಸ್ವತೀತೀರದ ವ್ಯಾಸಬದರಿಯಲ್ಲಿನ ಶ್ರೀ ವೇದವ್ಯಾಸದೇವರನ್ನು ನೆನೆದು, ಮಧ್ವಸರೋವರದ ತೀರದಲ್ಲಿನ ಶ್ರೀಮದಾಚಾರ್ಯರನ್ನು ನೆನೆದು, ಜ್ಞಾನಸಾಗರರಾದ ಶ್ರೀಮಟ್ಟೀಕಾಕೃತ್ಪಾದರನ್ನು ನೆನೆದು, ತುಂಗಭದ್ರಾನಡುಗಡ್ಡೆಯ ಶ್ರೀಮಚ್ಚಂದ್ರಿಕಾಚಾರ್ಯರುನ್ನು ನೆನೆದು, ಮಂತ್ರಾಲಯನಿವಾಸಿಗಳಾದ ಶ್ರೀ ರಾಘವೇಂದ್ರ ಸ್ವಾಮಿಗಳನ್ನು ನೆನೆದು ಮನದಣಿಯೆ ಮೈದಣಿಯೆ ಶ್ರೀ ಗುರುಭ್ಯೋ ನಮಃ ಎನ್ನುತ್ತ, ಶ್ರೀ ರಾಘವೇಂದ್ರಾಯ ನಮಃ ಎನ್ನುತ್ತ ಮಾಂ ಪಾಹಿ ಮಾಂ ಪಾಹಿ ಎನ್ನುತ್ತ ಭಕ್ತಿಯಿಂದ ಪ್ರದಕ್ಷಿಣೆ ಬಂದು ನಮಸ್ಕಾರಗಳನ್ನು ಹಾಕಿ.

ಮನಸ್ಸಿನಲ್ಲಿ ಮಂಚಾಲೆಯ ಪ್ರಭುಗಳ ವೃಂದಾವನ ಮೂಡಿರಲಿ. ಆ ಮಹಾವೃಂದಾವನಕ್ಕೆ ನಮಸ್ಕಾರ ಹಾಕುತ್ತಿದ್ದೇವೆ ಎಂಬ ಅನುಸಂಧಾನವಿರಲಿ. ರಾಯರು ಕರುಣೆಯಿಂದ ನಮ್ಮನ್ನು ನೋಡುತ್ತ ಅನುಗ್ರಹಿಸುತ್ತಿದ್ದಾರೆ ಎಂಬ ಭಾವನೆ ದೃಢವಾಗಿರಲಿ.

ನಿಮ್ಮ ಮನಸ್ಸಿನ ದುಗುಡವನ್ನೆಲ್ಲ ಅವರ ಮುಂದೆ ನಿವೇದಿಸಿಕೊಳ್ಳಿ. ಆ ರಾಯರ ಕುರಿತು ನಿಮಗಿರುವ ಭಕ್ತಿಯನ್ನು ಅವರ ಮುಂದೆ ಒಪ್ಪಿಸಿಕೊಳ್ಳಿ. ಅವರು ನಿಮ್ಮ ಮೇಲೆ ಮಾಡಿದ ಪರಮಾನುಗ್ರಹವನ್ನು ನೆನೆದು ಕಣ್ಣೀರಾಗಿ ಅವರ ಮಾಹಾತ್ಮ್ಯವನ್ನ ಚಿಂತನೆ ಮಾಡಿ. ನಿಮ್ಮ ಮನಸ್ಸಿನ ಅಪೇಕ್ಷೆಗಳನ್ನು ಬೇಡಿಕೊಳ್ಳಿ. **"ಸ್ವಾಮಿ, ಗುರುದೇವ, ಈ ಸಂಸಾರದ ತಾಪತ್ರಯ ಅದರ ಪರಿಹಾರದ ಬೇಡಿಕೆಗಳು ಸಾಕು. ನನ್ನನ್ನು ಈ ಸಂಸಾರದಿಂದ ಉದ್ಧರಿಸಿ"** ಎಂದು ವಿನಮ್ರವಾಗಿ ಪ್ರಾರ್ಥಿಸಿಕೊಳ್ಳಿ. ರಾಯರು ಕರುಣಾಳುಗಳು. ನಮ್ಮ ಉದ್ಧಾರಕ್ಕಾಗಿಯೇ ಅವತರಿಸಿ ಬಂದ ಮಹಾನುಭಾವರು. ನಮ್ಮನ್ನು ಉದ್ಧರಿಸುತ್ತಾರೆ.

ಮಠಗಳಿಗೆ ಹೋಗಿ, ಕಂಡಕಂಡವರನ್ನು ಮಾತನಾಡಿಸುತ್ತ, ಜನಜಂಗುಳಿಯ ಮಧ್ಯದಲ್ಲಿ ರಾಯರ ಸ್ಮರಣೆ ಮಾಡದೆ ಏನೇನೋ ವಿಷಯಗಳ ಕುರಿತು ಮಾತನಾಡುತ್ತ, ಅಲ್ಲಿನ ರಾಜಕೀಯ, ಅನಾಚಾರಗಳನ್ನು ಕಂಡು ಬೇಸರಿಸುತ್ತ ರಾಯರ ಆರಾಧನೆಯ ಪವಿತ್ರದಿನವನ್ನು ಕಳೆದುಕೊಳ್ಳುವ

ಬದಲು ಹೆಂಡತಿ ಮಕ್ಕಳನ್ನು ಕೂಡಿಸಿಕೊಂಡು ಈ ಬಾರಿ ಈ ರೀತಿಯ ಆರಾಧನೆ ಮಾಡಿನೋಡಿ.

ಅಷ್ಟೆ ಅಲ್ಲ, ನಿಮಗೆ ಕಷ್ಟ ಬಂದೊದಗಿದಾಗ, ರಾಯರ ಸೇವೆ ಮಾಡಬೇಕೆನಿಸಿಸಾಗ, ಶ್ರೀ ವಾದಿರಾಜಗುರುಸಾರ್ವಭೌಮರ ಸೇವೆ ಮಾಡಬೇಕೆನಿಸಾಗ ಆ ಪರಮಪವಿತ್ರ ಮಂತ್ರಾಲಯ ಸ್ವಾದಿ ಮುಂತಾದ ಕ್ಷೇತ್ರಗಳಿಗೆ ಹೋಗಲಿಕ್ಕೆ ಸಾಧ್ಯವಿಲ್ಲದ ಸಂದರ್ಭಗಳಲ್ಲಿ ಈ ರೀತಿಯಲ್ಲಿ ಮನೆಯಲ್ಲಿಯೇ ಸೇವೆ ಮಾಡಿ. ರಾಯರು ಕರುಣಿಸುತ್ತಾರೆ. ಮನೆಯನ್ನೇ ಮಂತ್ರಾಲಯವನ್ನಾಗಿ ಮಾಡುತ್ತಾರೆ.

ಮತ್ತೂ, ರಾಯರ ಮುಂದೊಂದು ಹಾಡು ಹಾಡಬೇಕು, ಸ್ತೋತ್ರ ಅನ್ನಬೇಕು ಎನ್ನುವ ಅಪೇಕ್ಷೆ ನಮಗೆಲ್ಲ ಇರುತ್ತದೆ. ಜನರ ಮಧ್ಯದಲ್ಲಿ ಹಾಡುವಷ್ಟು ಕಂಠಸಿರಿ, ಸಂಗೀತಜ್ಞಾನ ನಮಗಿರುವದಿಲ್ಲ. ಆದರೆ ಮನೆಯಲ್ಲಿ ರಾಯರ ಗ್ರಂಥಗಳ ಮುಂದೆ ಭಕ್ತಿಯಿಂದ ಅವರೇ ರಚಿಸಿದ **ಇಂದು ಎನಗೆ ಗೋವಿಂದ** ಎಂಬ ದಿವ್ಯಕೃತಿಯನ್ನು ಹಾಡಿ ನೋಡಿ. ನಿಮ್ಮ ಮನಸ್ಸು ಅದೆಷ್ಟು

ಭಕ್ತಿಯಿಂದ ತುಂಬಿ ಬರುತ್ತದೆ ಎನ್ನುವದು ನಿಮಗೇ ಅರ್ಥವಾಗುತ್ತದೆ.

ಸಂಜೆಯ ಹೊತ್ತು ನಿಮ್ಮ ಮನೆಯಲ್ಲಿ ನಿಮಗೋ ಮಕ್ಕಳಿಗೋ ಸಂಗೀತ ಬರುವದಾದರೆ, ವೀಣೆ, ಕೊಳಲು ನುಡಿಸಲು ಬರುವದಾದರೆ ರಾಯರ ಗ್ರಂಥದ ಮುಂದೆ ಕುಳಿತು ಆ ಸಂಗೀತಪ್ರಿಯರಿಗೆ ಸಂಗೀತಸೇವೆಯನ್ನು ಸಲ್ಲಿಸಿ. ನಿಮಗೆ ಬರುವಷ್ಟು ವೇದಮಂತ್ರಗಳನ್ನು, ಸ್ತೋತ್ರಗಳನ್ನು, ಶಾಸ್ತ್ರವನ್ನು ಗುರುವಿನ ಮುಂದೆ ಶಿಷ್ಯ ನಿವೇದಿಸಿಕೊಳ್ಳುವಂತೆ ಭಕ್ತಿಯಿಂದ ನಿವೇದಿಸಿಕೊಳ್ಳಿ.

ನಿಮಗೆ ಸಾಧ್ಯವಿದ್ದರೆ, ಅನುಕೂಲವಿದ್ದರೆ ಒಬ್ಬ ವಿಷ್ಣುಭಕ್ತ ಬ್ರಾಹ್ಮಣ ದಂಪತಿಗಳನ್ನು ಕರೆದು ಅಡಿಗೆ ಮಾಡಿ ಬಡಿಸಿ. ರಾಯರ ಮಾಹಾತ್ಮ್ಯವನ್ನು, ಅವರು ಗ್ರಂಥಗಳಲ್ಲಿ ಹೇಳಿರುವ ತತ್ವಗಳನ್ನು ಅವರಿಂದ ಕೇಳಿ. ಬ್ರಾಹ್ಮಣರನ್ನು ಕರೆದು ಅಡಿಗೆ ಮಾಡಿ ಬಡಿಸುವ ಸೌಕರ್ಯವಿಲ್ಲದಿದ್ದರೆ ಅಕ್ಕಿಬೇಳೆಗಳನ್ನು ಅವರ ಮನೆಗೆ ತಲುಪಿಸಿ ಕೃಷ್ಣಾರ್ಪಣ ಹೇಳಿ ಬನ್ನಿ.

ಇನ್ನು ರಾಯರ ಪ್ರೀತ್ಯರ್ಥವಾಗಿ ಮಾಡುವ ದಾನ. ರಾಘವೇಂದ್ರಸ್ವಾಮಿಗಳು ಜ್ಞಾನಪ್ರಿಯರು. ಅವರ ಇಡಿಯ ಜೀವನದಲ್ಲಿ — ಅವರು ವಿದ್ಯಾರ್ಥಿಯಾದಂದಿನಿಂದ ಆರಂಭಸಿ ಸಶರೀರ ವೃಂದಾವನ ಪ್ರವೇಶಮಾಡುವವರೆಗೆ — ಉಸಿರಿನಂತೆ ಪಾಲಿಸಿದ್ದು ಶಾಸ್ತ್ರಗ್ರಂಥಗಳ ಅಧ್ಯಯನವನ್ನು. ಅಷ್ಟೇ ಅಲ್ಲ, ಇವತ್ತಿನ ದಿವಸ ಶ್ರೀ ರಾಘವೇಂದ್ರಸ್ವಾಮಿಗಳ ಗ್ರಂಥಗಳಿಲ್ಲದೇ ಪರಿಶುದ್ಧವಾಗಿ ಶ್ರೀ ಮಧ್ವಶಾಸ್ತ್ರವನ್ನು ತಿಳಿಯಲು ಸಾಧ್ಯವೇ ಇಲ್ಲ. ಶಾಸ್ತ್ರವನ್ನು ಅಧ್ಯಯನ ಮಾಡುವ ನಮ್ಮಂತಹ ಮಂದರ ಮೇಲೆ ಮಹೋಪಕಾರವನ್ನು ಮಾಡಿ ತಿಳಿಯಾದ ಭಾಷೆಯಲ್ಲಿ ಬ್ರಹ್ಮತತ್ವವನ್ನು ಅರುಹಿದ ಕರುಣಾಳುಗಳು ಶ್ರೀರಾಘವೇಂದ್ರಸ್ವಾಮಿಗಳು. ನೀವೆಷ್ಟು ಜ್ಞಾನದ ಸೇವೆ ಮಾಡುತ್ತೀರೋ ಅಷ್ಟು ರಾಘವೇಂದ್ರಸ್ವಾಮಿಗಳು ಪ್ರೀತರಾಗುತ್ತಾರೆ. ಸಂನ್ಯಾಸಿಮೂರ್ಧನ್ಯರಾದ ಅವರಿಗೆ ಬಂಗಾರ ಬೆಳ್ಳಿಗಳು ಬೇಕಾಗಿಲ್ಲ. ಹೀಗಾಗಿ ಎಲ್ಲಿ ಅಧ್ಯಯನ ಅಧ್ಯಾಪನಗಳು ನಡೆಯುತ್ತಿವೆ, ಪಾಠಪ್ರವಚನಗಳು ನಡೆಯಿತ್ತಿವೆ, ಯಾವ ಪಂಡಿತರು ನಿಸ್ಪೃಹತೆಯಿಂದ

ಸಜ್ಜನರಿಗೆ ಶಿಷ್ಯರಿಗೆ ತತ್ವಗಳನ್ನು ತಲುಪಿಸಲು ಪ್ರಯತ್ನಿಸುತ್ತಿದ್ದಾರೆ, ಅಂತಹವರನ್ನು ಹುಡುಕಿ ಅವರಿಗೆ ದಾನವನ್ನು ನೀಡಿ. ನೀವು ನೀಡುವ ದಾನ ಹತ್ತು ರೂಪಾಯಿ ಯಾಗಿರಬಹುದು, ನೂರು ರೂಪಾಯಿಯಾಗಿರಬಹುದು ಅದು ಜ್ಞಾನಕಾರ್ಯಕ್ಕೆ ಉಪಯೋಗ ಬೀಳಲಿ. ಶ್ರೀ ರಾಘವೇಂದ್ರಸ್ವಾಮಿಗಳು ಪ್ರೀತರಾಗುತ್ತಾರೆ.

ಜನಜಂಗುಳಿಯಲ್ಲಿದ್ದರೆ ಸಾಧನೆಯಾಗುವದಿಲ್ಲ, ಎಲ್ಲಿ ಹೋದರೂ ಲೋಕವಾರ್ತೆಯೇ, ಗುರುಸ್ಮರಣೆ ಒದಗುವದು ಕಷ್ಟ. ಹೀಗಾಗಿ ಭಕ್ತಿಯಿಂದ ಮನೆಯನ್ನೇ ಮಂತ್ರಾಲಯ ಮಾಡಿ, ಆ ಮಂತ್ರಾಲಯದಲ್ಲಿ ಗುರುರಾಯರನ್ನು ಆರಾಧಿಸಿ.

ಶ್ರೀ ರಾಘವೇಂದ್ರಸ್ವಾಮಿಗಳ ಮತ್ತು ಸಮಗ್ರ ಗುರುಪರಂಪರೆಯ ಕರುಣೆ ನಿಮ್ಮೆಲ್ಲರ ಮೇಲಿರಲಿ ಎಂಬ ಪ್ರಾರ್ಥನೆಯನ್ನು ಭಕ್ತಿಯಿಂದ ಸಲ್ಲಿಸುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491